

ಸ್ವಿಟ್ಜರ್ಲೆಂಡ್‌ನ ಆಕರ್ಷಣೆ, ಯುಂಗ್ ಫ್ರಾ, ಐಗರ್ ಮತ್ತು ಮೋಂಕ್ ಶಿಖರಗಳು

ಸ್ಫಿಂಕ್ಸ್ ವೀಕ್ಷಣಾಲಯ ಯೂರೋಪಿನ 3570 ಮೀ. ಎತ್ತರದಲ್ಲಿದೆ. ರೈಲ್ವೇ ಸ್ಟೇಷನ್‌ನಿಂದ ಇಲ್ಲಿಗೆ ಪರ್ವತದ ಒಳಗೆ ಒಂದು ಎಲಿವೇಟರ್ ಅಳವಡಿಸಲಾಗಿದೆ. 108 ಮೀಟರ್ ಎತ್ತರವನ್ನು ಇದು ಕೇವಲ ಅರ್ಧ ನಿಮಿಷದಲ್ಲಿ ಕ್ರಮಿಸುತ್ತದೆ. ಇಡೀ ವೀಕ್ಷಣಾಲಯ ನಿರ್ಮಾಣವಾಗಿದ್ದೇ ತಂತ್ರಜ್ಞಾನದ ಒಂದು ಅಪೂರ್ವ ಸಾಧನೆ ಎನ್ನಬಹುದು. ಇಲ್ಲಿ ಎರಡು ಭಾಗಗಳಿವೆ. ಒಂದು ಹವಾಮಾನ ವೀಕ್ಷಣೆ ನಡೆಸುತ್ತದೆ. ಇನ್ನೊಂದು ಸೌರ ವೀಕ್ಷಣಾಲಯ. ಇದಲ್ಲದೆ ಕಾಸ್ಮಿಕ್ ಕಿರಣಗಳ ಕುರಿತ ವಿಶೇಷ ವೀಕ್ಷಣೆಗಳನ್ನು ಇಲ್ಲಿ 1949ರಲ್ಲಿಯೇ ನಡೆಸಲಾಗಿತ್ತು. ಕೆ ಮೇಸಾನ್ ಎಂಬ ಕಿರಣಗಳ ಆವಿಷ್ಕಾರಕ್ಕೆ ಸಂಬಂಧಿಸಿದ ಪ್ರಯೋಗಗಳು ಇಲ್ಲಿ ನಡೆದಿದ್ದವು. ಈ ಪ್ರಯೋಗಗಳಲ್ಲಿ ಭಾರತೀಯ ವಿಜ್ಞಾನಿ ಬಿಭಾ ಚೌಧುರಿ (1913–1991) ಪಾಲ್ಗೊಂಡಿದ್ದರು. ಈಕೆಯನ್ನು ಭಾರತೀಯರು ಮರೆತೇಬಿಟ್ಟಿರುವುದು ಶೋಚನೀಯ ಸಂಗತಿ.

ಹಿಮಶಿಖರಗಳು, ಅವುಗಳ ಮೇಲೆ ಜಾರಿ ಬೀಳುತ್ತವೆಯೋ ಎನ್ನಿಸುವ ಬಿಳಿ ಹಿಮನದಿಗಳು (ಗಡ್ಡೆಗಳು ಎನ್ನಬಹುದು). ಇಂಟರ್ ಲಾಕೆನ್ ಸ್ಟೇಷನ್‌ನಿಂದ ಕಾಣುವ ಶಿಖರಗಳ ಸಮೀಪ ನೋಟ ಇದು. ಇಲ್ಲಿಂದ ಸುಮಾರು 15 ನಿಮಿಷ ನಡೆದರೆ ಸ್ವಚ್ಛ ಸುಂದರ ಸರೋವರವೊಂದು ಎದುರಾಗುತ್ತದೆ. 'ಬಾಕಾಲ್ಪ್ಸೀ' ಎಂದು ಇದರ ಹೆಸರು. ಈ ಸರೋವರದ ಬಳಿಯ ನಡಿಗೆ ಎಲ್ಲರಿಗೂ ಪ್ರಿಯವಾಗುವಂಥದ್ದು. ದಾರಿಯಲ್ಲಿ ಬಣ್ಣ ಬಣ್ಣದ ಹೂಗಳು, ಪುಟ್ಟ ಝರಿಗಳು, ಜಲಪಾತಗಳ ನೋಟ ಹಿತಕರ. ಈ ಸೌಂದರ್ಯ ವೀಕ್ಷಿಸಲು ಜನ ಓಡಿ ಬರುವುದು ಆಶ್ಚರ್ಯವೇನಲ್ಲ.

ಮರುದಿನ ನಮ್ಮ ಪ್ರಯಾಣ ಇನ್ನೊಂದು ದಿಕ್ಕಿಗೆ. ಪುನಃ ರೈಲು ಹಿಡಿದು ಜಲಪಾತಗಳ ಮೂಲಕ ಹಾದು ಇನ್ನೊಂದು ರೈಲಿಗೆ ಬದಲಾಯಿಸಿದೆವು. ಅದು ಕ್ಲೈನ್ ಶೈಡಿಗ್ ಎಂಬಲ್ಲಿಗೆ ಕರೆದೊಯ್ದಿತು. 2000 ಮೀಟರ್ ಎತ್ತರದ ಪುಟ್ಟ ಊರು. ಇಲ್ಲಿಯವರೆಗೂ ರಸ್ತೆಗಳೂ ಇವೆ. ಇದು ಮೋಂಕ್ ಪರ್ವತದ ತಪ್ಪಲು. ಇಲ್ಲಿಂದ ಮೋಂಕ್ ಮತ್ತು ಐಗರ್ ಈ ಎರಡೂ ಶಿಖರಗಳ ಮಧ್ಯೆ ಇನ್ನೊಂದು ರೈಲು ಹಾದಿ. ಆ ಇನ್ನೊಂದು ರೈಲು ಹತ್ತಿದೆವು.

ಇದು ಮೇಲಿನ ಯುಂಗ್ ಫ್ರೌವರೆಗೂ ಹೋಗುವ ವಿಶೇಷ ರೈಲು. ಮಧ್ಯದಲ್ಲಿ ಒಂದು ಪುಟ್ಟ ನಿಲ್ದಾಣ – ಅಲ್ಲಿ ಇಳಿದರೆ ಐಗರ್ ಶಿಖರದ ಹಿಮನದಿಯನ್ನು ಮುಟ್ಟಬಹುದು ಎಂಬ ಕಾರಣಕ್ಕೆ ಮಾಡಿರುವ ನಿಲ್ದಾಣ. ಈಗ ಜಾಗತಿಕ ತಾಪಮಾನ ಹೆಚ್ಚಾಗಿರುವುದರಿಂದ ಹಿಮನದಿಗಳು ಕರಗಿ ಅವುಗಳ ಗಾತ್ರ ಸಂಕುಚಿಸಿದೆ. ಹಾಗಾಗಿ ನಿಲ್ದಾಣದಿಂದ ಮೂರ್ನಾಲ್ಕು ಮೀಟರ್ ಆಚೆ ಅವು ಕಂಡವು. (ಮೊದಲಲ್ಲಿ ನಿಲ್ದಾಣಕ್ಕೆ ಅಂಟಿಕೊಂಡೇ ಇರುತ್ತಿದ್ದವಂತೆ). ಅವುಗಳ ಸಮೀಪ ನೋಟ; ಅಗಾಧ ಗಾತ್ರ, ವಿನ್ಯಾಸಗಳ ವೈವಿಧ್ಯ ನೋಡಲು ಸಿಕ್ಕಿತು. ಇಲ್ಲಿಯವರೆಗೂ ಇನ್ನೊಂದು ದಿಕ್ಕಿನಿಂದ (ಗ್ರಿಂಡೆಲ್ ವಾಲ್ಡ್‌ನಿಂದ) ಗೊಂಡೊಲಾದಲ್ಲಿ ಬರಬಹುದು. ಇಲ್ಲಿಂದ ಮುಂದೆ ಮೇಲೇರಲು ಸಾಧ್ಯವಾಗುವುದು ಈ ವಿಶೇಷ ರೈಲಿನಲ್ಲಿ ಮಾತ್ರ (ಇಲ್ಲಿ ಒಂದು ರೈಲಿಗೆ ಹಿಂದಿ ಚಿತ್ರ ನಿರ್ಮಾಪಕ ಯಶ್ ಚೋಪ್ರಾ ಹೆಸರನ್ನು ಇಡಲಾಗಿದೆ).

ಇಲ್ಲಿಂದ ಮುಂದೆ ರೈಲು ಕಡಿದಾದ ಓರೆಕೋನದಲ್ಲಿ ಸುರಂಗದೊಳಗೇ ಏರುತ್ತದೆ. ಮೇಲೆ ಹಿಮ ಕೊರೆದು ಮಾಡಿರುವ ಸುರಂಗಗಳಿವೆ. ವಸ್ತು ಪ್ರದರ್ಶನವೂ ಇದೆ. ಆಕ್ಸಿಜನ್ ಕಡಿಮೆಯಾಗುವುದರಿಂದ ಹೊರಗೆ ಹೆಚ್ಚು ಹೊತ್ತು ಅಡ್ಡಾಡಲು ಅವಕಾಶವಿಲ್ಲ. ವೀಕ್ಷಣಾಲಯದ ನೋಟ ದೂರದಿಂದ ಮಾತ್ರ ದೊರಕುತ್ತದೆ.

ಈ ನಿಲ್ದಾಣದಲ್ಲಿ ಹೆಚ್ಚು ಹೊತ್ತು ನಿಲ್ಲುವಂತಿಲ್ಲ. ಇಳಿದು ಬಂದು ರೈಲು ಹತ್ತಿ ಐಗರ್ ನಿಲ್ದಾಣಕ್ಕೆ ಬಂದು ಅಲ್ಲಿ ಅಡ್ಡಾಡಬಹುದು ಅಥವಾ ಅದೇ ರೈಲಿನಲ್ಲಿ ಕ್ಲೈನ್ ಶೈಡಿಗ್‌ಗೆ ಹಿಂದಿರುಗಬಹುದು. ಹೆಚ್ಚಿನ ಜನ ನಡೆದು ಹೋಗಲು ಸಿದ್ಧವಾಗಿ ಬಂದಿರುತ್ತಾರೆ. ಎಲ್ಲ ಸ್ಥಳಗಳಿಂದಲೂ ಹೀಗೆ ಕಾಲು ಹಾದಿಗಳಿರುತ್ತವೆ. ಬೆನ್ನ ಮೇಲೆ ಮೂಟೆ ಹೊತ್ತು ಕೈಗಳಲ್ಲಿ ಕೋಲು ಹಿಡಿದು ಕಿಮೀಗಟ್ಟಲೆ ಕ್ರಮಿಸುವ ಪ್ರವಾಸಿಗಳು ಎಲ್ಲೆಲ್ಲೂ ಕಾಣಸಿಗುತ್ತಾರೆ.

ಲಾಯ್ಟರ್ ಬ್ರೂನೆನ್‌ನಿಂದ ಹೆಲಿಕಾಪ್ಟರ್‌ಗಳ ವ್ಯವಸ್ಥೆಯೂ ಇದೆ. ನಮ್ಮ ಕೋಣೆಯ ಕಿಟಕಿಯಿಂದ ಅವುಗಳ ಹಾರಾಟ ನೋಡಬಹುದಾಗಿತ್ತು. ಬೆಟ್ಟದಿಂದ ಕೆಳಗಿಳಿಯುವ ಹಾದಿಯಲ್ಲಿ ಈ ಮೂರೂ ದೊಡ್ಡ ಶಿಖರಗಳ ಬೇರೆ ಬೇರೆ ಕೋನಗಳ ನೋಟಗಳು, ವೈವಿಧ್ಯಮಯ ಹಿಮನದಿಗಳು, ಸಣ್ಣ ಸಣ್ಣ ಜಲಪಾತಗಳು ಕಂಡು ಬರುತ್ತವೆ. ಕೆಲವೊಂದು ತಿರುವುಗಳಲ್ಲಿ ಕೆಳಗಿನ ಕಣಿವೆ ಮತ್ತು ಪುಟ್ಟ ಪುಟ್ಟ ಹಳ್ಳಿಗಳು ಕಂಡುಬರುತ್ತವೆ.

ನೂರು ವರ್ಷಗಳ ಹಿಂದೆ, ಅಂದರೆ 1924ರಲ್ಲಿ ಸುರಂಗದೊಳಗಿನ ರೈಲು ಮಾರ್ಗ ಸಿದ್ಧವಾಯಿತು. 1896ರಲ್ಲಿ ಆರಂಭವಾದ ಈ ಯೋಜನೆಗೆ ಹವಾಮಾನವೇ ದೊಡ್ಡ ಅಡಚಣೆಯಾಗಿತ್ತು. ಓಡಾಟ ಸುಗಮವಾದ ಮೇಲೆ ವೀಕ್ಷಣಾಲಯ ಸ್ಥಾಪನೆಯಾಯಿತು. 1937ರಿಂದ ಇಲ್ಲಿ ವಿಶಿಷ್ಟ ಪ್ರಯೋಗಗಳು ನಡೆದವು.

ಇಲ್ಲಿಯ ಜೀವನ ಬೇಸಿಗೆಗೆ ಮಾತ್ರ ಮೀಸಲು. ಅಕ್ಟೋಬರ್‌ನಲ್ಲಿ ಜಾನುವಾರು ಸಹಿತ ಜನ ಕೆಳಗೆ ಬರುತ್ತಾರೆ. ಹಿಮದ ಮೇಲಿನ ಸ್ಕೀಯಿಂಗ್ ಮುಂತಾದ ಆಟಗಳ ನಿರ್ವಹಣೆ ಮಾತ್ರ ಸಕ್ರಿಯವಾಗಿರುತ್ತದೆ.

2000 ಮೀಟರ್‌ನಿಂದ 3500 ಮೀಟರ್ ಎತ್ತರವನ್ನು ಕೇವಲ ಅರ್ಧ ಗಂಟೆಯೊಳಗೆ ಕ್ರಮಿಸಿದ್ದು ಒಂದು ಅಪೂರ್ವ ಅನುಭವ. ಇದೇ ಎತ್ತರವನ್ನು ಕ್ರಮಿಸಲು ಅತ್ಯುತ್ತಮ ರಸ್ತೆಗಳಿರುವ ಚಿಕ್ಕಮಗಳೂರಿನಲ್ಲಿ ಎರಡು ಮೂರು ಗಂಟೆಗಳು ಬೇಕಾಗುವುದು. ಅತ್ಯಂತ ದುರ್ಗಮವಾದ ಹಿಮಾಲಯದಲ್ಲಿ ಆರೇಳು ಗಂಟೆಗಳೇ ಬೇಕಾಗುವುವು.

ಇಲ್ಲಿಯವರೆಗೂ ಸುಸೂತ್ರವಾಗಿ ನಮ್ಮನ್ನು ಓಡಾಡಿಸಿದ ರೈಲು ಈ ಹಂತದಲ್ಲಿ ಸ್ವಲ್ಪ ತೊಂದರೆ ಕೊಟ್ಟಿತು. ಅರ್ಧ ಗಂಟೆಯಲ್ಲಿ ಬರಬೇಕಾಗಿದ್ದ ರೈಲು ರದ್ದಾಯಿತು. ಆದರೆ ಅಲ್ಲಿದ್ದ ಯಾರೂ ಆ ಬಗ್ಗೆ ತಲೆಕೆಡಿಸಿಕೊಳ್ಳಲಿಲ್ಲ. ಅಲ್ಲಿದ್ದ ಒಂದೇ ಒಂದು ರೆಸ್ಟೋರೆಂಟ್‌ಗೆ ಹೋಗಿ ತಮ್ಮ ಹಸಿವು ತಣಿಸಿಕೊಂಡರು. ಅಲ್ಲಿ ಇಲ್ಲಿ ಅಡ್ಡಾಡಿದರು. ಕೆಲವರು ನಡೆದುಕೊಂಡೇ ಕೆಳಗಿಳಿದರು. ಒಂದು ಗಂಟೆಯ ನಂತರ ಇನ್ನೊಂದು ರೈಲು ಸಿದ್ಧವಾಯಿತು. ನೂಕುನುಗ್ಗಲು, ಜಗಳ, ಕದನ, ಏನೂ ನಡೆಯಲಿಲ್ಲ. ತಾಳ್ಮೆಯಿಂದ ಹತ್ತಿ ನಿಂತುಕೊಂಡೇ ಪ್ರಯಾಣ ಮುಂದುವರೆಸಿದರು. ಅಷ್ಟೇ. ಮುಂದೆ ಎಲ್ಲ ಪ್ರಯಾಣ ಸುಗಮವಾಗಿತ್ತು.

ವೆಂಡಿಗ್ ವಾಲ್ಡ್ ತಲುಪಿ ಮನೆಯ ಕಿಟಕಿಯಿಂದ ನೋಡಿದಾಗ ಆ ಹಿಮಶಿಖರಗಳು ಹೊಂಬಣ್ಣ ಹೊದ್ದು ಚಂದ್ರನನ್ನು ಸ್ವಾಗತಿಸುತ್ತಿದ್ದವು. ಬನ್ನಿ ಬನ್ನಿ ಎಂದು ಕೂಗಿ ಕರೆಯುತ್ತಿದ್ದವು. ಈಗ ಇದು ಕನಸು ಎನ್ನಿಸುತ್ತಿದೆ.

ಪ್ರತಿಕ್ರಿಯಿಸಿ: feedback@sudha.co.in